## 3ನೇ ಪ್ರ ದ ನ್ಯಾ ದಂಡಾಧಿಕಾರಿಯವರ ನ್ಯಾಯಾಲಯ, ಮೈಸೂರು.

**ಸಿ.ಸಿ. ನಂ. 10275/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ | ಪೊನ್ನಪ್ಪ | **ಪ್ರಾಸಾ ಃ1** |
| **ತಂದೆಯ ಹೆಸರು** | ಃ | ಲೇ.ಭೀಮಯ್ಯ | **ಚಾಸಾ ಃ1** |
| **ವಯಸ್ಸು** | ಃ | **71** | |
| **ಉದ್ಯೋಗ** | ಃ | ನಿವೃತ್ತ ಸೈನಿಕರು,ವ್ಯವಸಾಯ | **ಪ್ರ ವ ಬೋಃ** |
| **ವಾಸ** | ಃ | ಅರವತೂಪಲು ,ಕೊಡಗು | **ದಿಃ09.08-2023** |

**ಮುಖ್ಯ ವಿಚಾರಣೆ ಃ ಮಾನ್ಯ ಎ ಪಿ ಪಿ ಯವರಿಂದಃ**

**1.** ದಿಃ**07.02.2022** ರಂದು ನಾನು ಮೈಸೂರಿನ ರಾಜೀವ ನಗರದ ನನ್ನ ತಂಗಿ ಮನೆಗೆ ಬಂದಿದ್ದೆ. ಆ ದಿನ ಬಸ್ಸಿನಲ್ಲಿ ಬಂದು ನನ್ನ ತಂಗಿಯ ಮನೆಯಲ್ಲಿದ್ದ ತಮ್ಮನ ಮಗನ ಹೆಸರಿನಲ್ಲಿದ್ದ ದ್ವಿಚಕ್ರ ವಾಹನ ಸಂಃಕೆಎ-55-ಕ್ಯೂ-5423 ಲ್ಲಿ ಟೆರೆಶಿಯನ್ ಕಾಲೇಜು ಕಡೆಯಿಂದ ಪೆಟ್ರೋಲ ಹಾಕಿಸಲು ವಿಶ್ವನಾಥ ರವರ ಪೆಟ್ರೋಲ ಬಂಕಿಗೆ ಹೋಗಲು ಬಲಭಾಗದ ಇಂಡಿಕೇಟರ್ ಹಾಕಿ ನಿಲ್ಲಿಸಿದ್ದೆ. ಆಗ ಬೆಳಗ್ಗೆ 10.30 ಆಗಿತ್ತು. ನನ್ನ ಹಿಂದುಗಡೆಯಿಂದ ಆ ಸಮಯ ದ್ವಿಚಕ್ರ ವಾಹನದ ಸವಾರನು ತನ್ನ ಕೈಯಲ್ಲಿ ಮೊಬೈಲು ಫೋನು ಇಟ್ಟುಕೊಂಡು ವೇಗವಾಗಿ ಬಂದು ನನ್ನ ಗಾಡಿಯ ಹಿಂಭಾಗಕ್ಕೆ ಡಿಕ್ಕಿ ಮಾಡಿದ ಪರಿಣಾಮ ನಾನು ಕೆಳಗೆ ಬಿದ್ದು ನನ್ನ ಎಡಗಾಲು ಮುರಿದು ರಕ್ತಸ್ರಾವವಾಗಿತ್ತು. ಆಗ ಅಲ್ಲಿದ್ದ ಜನರು ನನ್ನನ್ನು ಉಪಚರಿಸಿದರು. ನಾನು ಅಪಘಾತದ ವಾಹನದ ಫೋಟೋ ತೆಗೆದೆ. ಅಪಘಾತಪಡಿಸಿದ ದ್ವಿಚಕ್ರ ವಾಹನದ ಸವಾರನಿಗೆ ಗಾಯವಾಗಿರಲಿಲ್ಲ. ಆತ ಓಡಲು ಪ್ರಯತ್ನಿಸಿದ್ದನು. ಸಾರ್ವಜನಿಕರ ಸಹಾಯದಿಂದ ಆತನನು ಹಿಡಿದೆವು. ನಾನು ಆತನ ದ್ವಿಚಕ್ರ ವಾಹನದ ಭಾವಚಿತ್ರವನ್ನು ನನ್ನ ಮೊಬೈಲನಲ್ಲಿ ತೆಗೆದಿದ್ದೆ ನಂತರ ಆಟೋ ರಿಕ್ಷಾ ಚಾಲಕ ನನ್ನನು ಮಹದೇಶ್ವರ ನರ್ಸಿಂಗ ಹೋಂಗೆ ಕರೆದುಕೊಂಡು ಹೋದರು. ಅಲ್ಲಿ ನನ್ನ ಕಾಲಿಗೆ ಪಿಓಪಿ ಪ್ಲಾಸ್ಟರ್ ಹಾಕಿ ಅಲ್ಲಿ ನನ್ನನ್ನು ನೋಡಿಕೊಳ್ಳಲು ಯಾರು ಇಲ್ಲದ ಕಾರಣ ನಾನು ನನ್ನ ರಾಜೀವ ನಗರದ ಸಂಬಂಧಿಕರ ಮನೆಗೆ ಹೋಗಿರುತ್ತೇನೆ. ನಂತರ ನಾನು ಮನಯಲ್ಲೇ ಚಿಕಿತ್ಸೆ ಮತ್ತು ವಿಶ್ರಾಂತಿಯನು ಪಡೆಯುತ್ತಿದ್ದೆ. ಅಲ್ಲಿ ನನ್ನ ತಂಗಿ ಪೊಲೀಸರಿಗೆ ದೂರು ಕೊಡಲಿಲ್ಲ. ನನ್ನ ಪರಿಚಯದ ಪೊಲೀಸರನು ವಿಚಾರಿಸಿದಾಗ ಅವರು ಪೊಲೀಸರಿಗೆ ಇಂಟಿಮೇಶನ್ ಆಸ್ಪತ್ರೆಯಿಂದ ಬಂದಿಲ್ಲ ಎಂದು ತಿಳಿಸಿರುತ್ತಾರೆ. ನಾನು ಆಸ್ಪತ್ರೆಯಲ್ಲಿ ಪ್ಲಾಸ್ಟರ ಹಾಕಿಸಿಕೊಳ್ಳುತ್ತಿದ್ದಾಗ ಅಪಘಾತಪಡಿಸಿದ ಸವಾರನ ಕಡೆಯಿಂದ ಆರಾಧ್ಯ ಮತ್ತು ವಿಶ್ವನಾಥ ಎನ್ನುವವರು ಬಂದಿದ್ದರು. ಅವರು ಪೋಸ್ಟಲ್ ಇಲಾಖೆಯವರು ಎಂದು ತಿಳಿಸಿದರು. ಅವರಿಬ್ಬರೂ ಆಸ್ಪತ್ರೆಗೆ ಬಂದು ನಾನಾಗೇ ಬಿದ್ದಿದ್ದೇನೆ ಎಂದು ಆಸ್ಪತ್ರೆಯವರಿಗೆ ಹೇಳಿದ್ದರಿಂದ ಆಸ್ಪತ್ರೆಯವರು ಪೊಲೀಸರಿಗೆ ಇಂಟೀಮೇಶನ್ ಕೊಟ್ಟಿಲ್ಲ ಎಂದು ಗೊತ್ತಾಯಿತು. ನನಗೆ

ಅಪಘಾತಪಡಿಸಿದ ದ್ವಿಚಕ್ರ ವಾಹನದ ನಂಬರು ನನಗೆ ನೆನಪಿಲ್ಲ. ನಾನು ದೂರು ನೀಡುವಾಗ ಅದರ ನಂಬರನ್ನು ನಮೂದಿಸಿದ್ದೇನೆ. ಸುಮಾರು 1 ವರೆ ತಿಂಗಳ ನತಂರ ದೂರನ್ನು ದಾಖಲಿಸಿರುತ್ತೇನೆ. ನಾನು ಓಡಾಡುವ ಸ್ಥಿತಿಯಲ್ಲಿ ಇಲ್ಲದೇ ಇರುವುದರಿಂದ ಮತ್ತು ನನಗೆ ಗಾಯವಾಗಿದ್ದರಿಂದ ವಿಶ್ರಾಂತಿ ಪಡೆದು ತಡವಾಗಿ ದೂರನ್ನು ದಾಖಲಿಸಿರುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು.

2. ದೂರು ಕೊಟ್ಟ ದಿನವೇ ಮಧ್ಯಾಹ್ನದ ಸಮಯ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಮಹಜರನ್ನು ನಾನು ಘಟನಾ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಮಹಜರುನ್ನು ಮತ್ತು ಕಚ್ಚಾ ನಕಾಶೆಯನ್ನು ಪಂಚರ ಸಮಕ್ಷಮ ಬರೆದು ನನ್ನ ಸಹಿ ಪಡೆದಿರುತ್ತಾರೆ. ಸದರಿ ಮಹಜರನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2 ಎ ಎಂದು, ಕಚ್ಚಾ ನಕಾಶೆಯನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3 ಎ ಎಂದು ಗುರುತಿಸಲಾಯಿತು. ಅಪಘಾತದ ನಂತರ ನನ್ನ ವಾಹನವನು ಪೊಲೀಸರು ಠಾಣೆಗೆ ತೆಗೆದುಕೊಂಡು ಹೋಗಿದ್ದರು. ಮಹಜರು ಕಾಲದಲ್ಲಿ ಆ ವಾಹನವನ್ನು ತರಲಾಗಿತ್ತೇ ಎಂದು ನನಗೆ ನೆನಪಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದು ಆತನನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ

1. ಮಹಜರು ಕಾಲದಲ್ಲಿ ನಾನು ಘಟನಾ ಸ್ಥಳಕ್ಕೆ ನನ್ನ ಮೋಟಾರು ಸೈಕಲು ಸಂಃಕೆಎ-55-ಕ್ಯೂ-5423 ನ್ನು ನಾನು ಹಾಜರುಪಡಿಸಿದ ಮೇರೆಗೆ ಪೊಲೀಸರು ಅದನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ. ನಾನು ಹಿರಿಯ ನಾಗರೀಕನಾದ ಕಾರಣ ಜ್ಞಾಪಕ ಶಕ್ತಿ ಕಡಿಮೆಯಾಗಿದೆ ಎನ್ನುತ್ತಾರೆ. ನನ್ನ ತಂಗಿಯ ಮಗ ಬಂದು ವಾಹನವನ್ನು ತನ್ನ ವಶಕ್ಕೆ ಪಡೆದಿರುತ್ತಾನೆ.

ಪಾಟೀ ಸವಾಲುಃಃ ಆರೋಪಿ ಪರ ಶ್ರೀಮತಿ.ಎ.ಆರ್.ಜೆ ವಕೀಲರಿಂದಃಃ

1. ನನಗೆ ಅಪಘಾತವಾದಾಗ 70 ವರ್ಷವಾಗಿತ್ತು. ನನಗೆ ವಯೋಸಹಜವಾಗಿ ಕಣ್ಣಿನ ಸಮಸ್ಯೆ ಇದೆ. ಅಪಘಾತ ಸಮಯದಲ್ಲಿ ನಾನು ವ್ಯವಸಾಯ ಮಾಡುತ್ತಿದ್ದೆ. ನಾನು ಒಬ್ಬನೇ ಮನೆಯಲ್ಲಿರುತ್ತೇನೆ. ನನಗೆ ಮದುವೆಯಾಗಿಲ್ಲ. ನನ್ನ ತಂಗಿಯ ಮನೆಯಲ್ಲಿದ್ದ ವಾಹನಕ್ಕೆ ವಿಮೆ ಇತ್ತು. ನನಗೆ ವಾಹನ ಚಲಾಯಿಸಲು

ಡಿಎಲ್ ಇತ್ತು. ನನಗೆ ವಾಹನ ಚಲಾಯಿಸಲು ಡಿಎಲ್ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮೈಸೂರಿನ ಡಾ.ಅಭಿಜಿತ ರವರನ್ನು ಕಾಣಲು ಮತ್ತು ಪೊಲೀಸರನ್ನು ಕಾಣಲು ಮೈಸೂರಿಗೆ ಬಂದಿದ್ದೆ. ಸದರಿ ರಸ್ತೆಯಲ್ಲಿ ಹಳ್ಳ ಕೊಳ್ಳ ಇತ್ತು ಎಂದರೆ ಸಾಕ್ಷಿಯು ಹಳ್ಳ ಕೊಳ್ಳ ಇಲ್ಲದ ರಸ್ತೆ ಇಲ್ಲ ಎನ್ನುತ್ತಾರೆ. ಆ ಸಮಯದಲ್ಲಿ ವಾಹನದಟ್ಟಣೆ ಇತ್ತು ಎಂದರೆ ಸರಿ . ಅದೇ ಕಾರಣದಿಂದ ವಾಹನಗಳು ವೇಗವಾಗಿ ಚಲಿಸಲು ಸಾಧವಿಲ್ಲ ಎಂದರೆ ಸಾಕ್ಷಿಯು ಆರೋಪಿ ವಾಹನ ವೇಗವಾಗಿ ಚಲಾಯಿಸಿದ್ದಾರೆ ಎನ್ನುತ್ತಾರೆ. ದೂರನ್ನು ಠಾಣೆಯಲ್ಲಿ ಟೈಪ ಮಾಡಿಸಿರುತ್ತೇನೆ. ನಾನು ಪೊಲೀಸ್ ಠಾಣೆಯಲ್ಲಿ ದೂರಿಗೆ ಸಹಿ ಹಾಕಿದ್ದು ಗೊತ್ತು. ಟೈಪ ಎಲ್ಲಿ ಮಾಡಿಸಿದ್ದು ಎಂದು ನನಗೆ ಗೊತ್ತಿಲ್ಲ. ದೂರಿನಲ್ಲಿ ಆ ಸಮಯ ನಾನು ಓದುವ ಪರಿಸ್ಥಿತಿಯಲ್ಲಿರಲಿಲ್ಲ. ಈ ದಿನ ಓದಿರುತ್ತೇನೆ. ಘಟನೆ ವೇಳೆ ಆರೋಪಿ ಸ್ಥಳದಲ್ಲಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತವು ಆರೋಪಿ ತಪ್ಪಿನಿಂದ ಸಂಭವಿಸಿಲ್ಲ ಎಂದರೆ ಸರಿಯಲ್ಲ. ಮಹಜರು ಮತ್ತು ಕಚ್ಚಾ ನಕಾಶೆಗೆ ನಾನು ಠಾಣೆಯಲ್ಲಿ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಮಹಜರು ಮತ್ತು ಕಚ್ಚಾ ನಕಾಶೆಯನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ನಾನು ಇದೇ ರೀತಿ ಬೇರೆ ಅಪಘಾತದ ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು ನನಗೆ ಇದೇ ಮೊದಲ ಬಾರಿಗೆ ಅಪಘಾತವಾಗಿದೆ ಎನ್ನುತ್ತಾರೆ. ನಾನು ಆರೋಪಿಯನ್ನು ನೋಡಿಲ್ಲ ಮತ್ತು ಆರೋಪಿ ಅಪಘಾತ ಮಾಡದಿದ್ದರೂ ಸಹ ಆತನೇ ಅಪಘಾತ ಮಾಡಿದ್ದಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೆಟ್ರೋಲ ಬಂಕ್ ಪಕ್ಕ ಗೋಪಲಗೌಡ ಆಸ್ಪತ್ರೆ ಇದೆ ಎಂದರೆ ಸರಿ . ನನ್ನನ್ನು ಸಾರ್ವಜನಿಕರು ಅಲ್ಲಿಗೆ ಕರೆದುಕೊಂಡು ಹೋಗಲಿಲ್ಲ. ಮಹದೇಶ್ವರ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಪಘಾತವು ನನ್ನ ತಪ್ಪಿನಿಂದ ಸಂಭವಿಸಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

**ಓ. ಹೇ. ಕೇ. ಸರಿ. ಇದೆ.,**

**3ನೇ ಪ್ರ. ದ. ನ್ಯಾ. ದಂ., ಮೈಸೂರು.**